ಮಾಡಬಹುದಿತ್ತು.

ಜೀವನ ತರ್ಕ ವಿತರ್ಕದಲ್ಲಿ ಸಿಲುಕಿತ್ತು; ಈ ನಡುವೆ ಕಹಿ ಘಟನೆಯೊಂದು ಘಟಿಸಿತು, ಈ ಬಗ್ಗೆ ದೋಷಾರೋಪಣೆಯನ್ನು ನಾನು ಯಾರ ಮೇಲೂ ಹೊರಿಸಲಾರೆ. ಇದನ್ನು ನನ್ನ ಹಣೆಬರಹ ಎನ್ನುತ್ತೇನೆ.

'ಏನಾಯ್ತು?' ಪಾಲ್ ಪ್ರಶ್ನಿಸುತ್ತಿದ್ದಾನೆ.

ನನ್ನ ಮೇಲೆ ಮೂರನೆಯ ವಜ್ರಪಾತವಾಗಿತ್ತು.

'ಹಾಲೇಲುಯಿಯಾ ಓಹ್, ನೋ...'

ನನಗೆ ಆಗ ಇಪ್ಪತ್ತೆಂಟನೆಯ ವಯಸ್ಸು. ಮೊಮ್ಬಾಸಾಕ್ಕೆ ಬಂದು ಐದು ವರ್ಷಗಳೇ ಆಗಿತ್ತು. ನಾನು ದುರಾಚಾರಿ ಪತಿಯ ಆಚರಣೆಯಿಂದಾಗಿ ಬೇಸರದಿಂದಿದ್ದೆ; ಅದೊಂದು ದಿನ ನನಗೆ, ನನ್ನ ಪ್ರೀತಿಯ ಸಹೋದರ ನೀಲ್ ತೀವ್ರ ಕಾಯಿಲೆಯಲ್ಲಿ ನರಳುತ್ತಿರುವ ಸುದ್ದಿ ಸಿಕ್ಕಿತು. ಅವನಿಗೆ ಸಾಮಾನ್ಯ ಗ್ಯಾಸ್ಟ್ರೋ ಇನ್‌ಫೆಕ್ಷನ್ ಆಗಿತ್ತು. ನೀಲ್ ಮತ್ತು ನಾನು ಅವಧಿಗೆ ಮೊದಲೇ ಅಂದರೆ ಎಂಟನೆಯ ತಿಂಗಳಿನಲ್ಲಿ ಹುಟ್ಟಿದ್ದೆವು ಎಂಬುದನ್ನು ಈ ಮೊದಲೇ ಪ್ರಸ್ತಾಪಿಸಿದ್ದೇನೆ. ನನಗೆ ಆರೋಗ್ಯದಲ್ಲಿ ಏರುಪೇರು ಆಗಲಿಲ್ಲ. ಆದರೆ ನೀಲ್‌ಗೆ ಹುಟ್ಟಿದ ಹದಿನೈದು ದಿನಗಳ ನಂತರ ಉಸಿರಾಟದ ಸಮಸ್ಯೆ ಪ್ರಾರಂಭವಾಗಿತ್ತು. ಚಿಕ್ಕವನಿದ್ದಾಗ ಅವನಿಗೆ ಪದೇಪದೇ ಉಬ್ಬಸದ ಪ್ರಕೋಪ ಕಾಡಿಸುತ್ತಿತ್ತು, ಉಳಿದಂತೆ ಅವನು ತುಂಬಾ ಚಟುವಟಿಕೆಯಿಂದಿದ್ದ. ಅವನ ಉಸಿರಾಟಕ್ಕೆ ಸಂಬಂಧಿಸಿದಂತೆ ಯಾವುದೇ ನಿಶ್ಚಿತ ಕಾರಣ ನಮಗೆ ತಿಳಿದು ಬರುತ್ತಿರಲಿಲ್ಲ.

ತಂಬಾಕಿನ ಹೊಗೆ, ಅತ್ತರು, ಸುವಾಸನೆಯ ಪುಡಿ, ಮಣ್ಣು, ಧೂಳಿನ ಕಣಗಳು, ಕಟ್ಟಿಗೆಯ ಹೊಗೆ, ಸುಗಂಧದ ಮೇಣದಬತ್ತಿ, ವಾಯುಮಾಲಿನ್ಯ, ತೀವ್ರ ವಾಸನೆ ಮತ್ತು ವಿಷಾಣು ಸಂಕ್ರಮಣ... ಇಂಥ ಉದ್ರೇಕದ ವಾತಾವರಣದಲ್ಲಿ ನೀಲ್‌ಗೆ ಗಂಟಲು ಕೆರೆತ, ಕೆಮ್ಮು, ಎದೆಯಲ್ಲಿ ಬಿಗಿತ ಮತ್ತು ಉಸಿರಾಡಲು ಕಷ್ಟವಾಗುತ್ತಿತ್ತು.

ನೀಲ್‌ಗೆ ಗ್ಯಾಸ್ಟ್ರೋ ಇನ್‌ಫೆಕ್ಷನ್ ಆದಾಗ, ಚಿಕಿತ್ಸೆಗೆ ಅವನು ಆಸ್ಪತ್ರೆಗೆ ದಾಖಲಾಗಬೇಕಾಯಿತು. ಆಸ್ತಮಾ ಮತ್ತೂ ಬಿಗಡಾಯಿಸಿತು. ಬ್ಯಾಕ್ಟೀರಿಯಾದಿಂದ ಉಂಟಾದ ರೋಗ, ಈ ಕಾಯಿಲೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ. ಅವನಿಗೆ ಚಿಕಿತ್ಸೆ ಕೊಡುತ್ತಿದ್ದ ವೈದ್ಯರು ಹೊಸಬರಾಗಿದ್ದರು. ಒಂದಾದ ಮೇಲೆ ಒಂದರಂತೆ ಸಮಸ್ಯೆಗಳು ಹುಟ್ಟಿಕೊಳ್ಳುತ್ತಾ ಹೋದವು. ಅವನನ್ನು ವೆಂಟಿಲೇಟರ್‌ನಲ್ಲಿ ಇಡಬೇಕಾಯಿತು. ಕಡೆಗೆ ವೆಂಟಿಲೇಟರ್‌ನಿಂದಾದ ನ್ಯೂಮೋನಿಯಾ ಇನ್‌ಫೆಕ್ಷನ್ ಪ್ರಾಣಕ್ಕೇ ಕುತ್ತಾಯಿತು.

ನೀಲ್‌ನ ಅನಾರೋಗ್ಯದ ಸುದ್ದಿಯನ್ನು ಕೇಳಿ ನಾನು ಅವನನ್ನು ನೋಡಲು ಮೊಮ್ಬಾಸಾದಿಂದ ಮಲಪ್ಪುರಮ್‌ಗೆ ಹೋದೆ. ನನಗಿಂತ ಮೊದಲು ಜಾರ್ಜ್ ಮತ್ತು ರೇಚಲ್ ಮಲಪ್ಪುರಮ್‌ಗೆ ಹೋಗಿದ್ದರು. ನಾನು ಹೋದಾಗ ನೀಲ್ ವೆಂಟಿಲೇಟರ್‌ನಲ್ಲಿದ್ದ. ಅವನ ಬಾಯಿಗೆ ಟ್ಯೂಬನ್ನು ತುರುಕಲಾಗಿತ್ತು. ಅವನು ಮಾತನಾಡಲು ಸಾಧ್ಯವಿರಲಿಲ್ಲ. ತಾನು ಹೇಳಬೇಕೆಂದಿರುವುದನ್ನು ಬರೆದುಕೊಡುತ್ತಿದ್ದ. ಅವನಲ್ಲಿ ಸಾವಿನ ಭಯ ಆವರಿಸಿತ್ತು. ಒಮ್ಮೆ ಅವನು ನನಗೆ, 'ಜೀವನ ಚಿಕ್ಕದು, ನಾಳೆಗೆ ಎಂದೂ ಮುಂದೂಡಬೇಡ. ಏನು ಮಾಡಬೇಕೋ, ಅದನ್ನು ಕೂಡಲೇ ಮಾಡು' ಎಂದು ಬರೆದುಕೊಟ್ಟ.

ನೀಲ್‌ನ ಚಡಪಡಿಕೆ, ನರಳಾಟ, ಅವನ ನೋವನ್ನು ನಮ್ಮಿಂದ ನೋಡಲಾಗಲಿಲ್ಲ. ನೋವಿನ ಆಘಾತಕ್ಕೆ ಅವನ ಶರೀರ ನರಳುತ್ತಿದ್ದು, ಅವನಿಗೆ ಯಾವ ಮಗ್ಗಲಿನಿಂದಲೂ ನೆಮ್ಮದಿ ಸಿಗುತ್ತಿರಲಿಲ್ಲ. ನಾನು ಮನೆಗೆ ಹೋಗಬೇಕು, ನಾನು ಇನ್ನು ಆಸ್ಪತ್ರೆಯಲ್ಲಿರಲು ಸಾಧ್ಯವಿಲ್ಲ ಎಂದು ನಮಗೆ ಹೇಳುತ್ತಿದ್ದ. ನಾವು ವೈದ್ಯರ ಬಳಿ ಮಾತನಾಡುತ್ತಿದ್ದೆವು, ಆದರೆ ಅವರಿಂದ ಯಾವುದೇ ಉತ್ತರ ಬರುತ್ತಿರಲಿಲ್ಲ. ಅವನನ್ನು ಆಸ್ಪತ್ರೆಯಿಂದ ಬಿಡುಗಡೆ ಸಹ ಮಾಡುತ್ತಿರಲಿಲ್ಲ, ಅವನನ್ನು ಗುಣಪಡಿಸಲೂ ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಆ ಹದಿನೈದು ದಿನಗಳು ಒತ್ತಡದ ದಿನಗಳಾಗಿದ್ದವು. ಅಷ್ಟು ಅಸಹಾಯಕತೆಯನ್ನು ನಾವೆಂದೂ ನೋಡಿರಲಿಲ್ಲ. ನೀಲ್‌ನನ್ನು ಸಾವಿನ ದವಡೆಯಿಂದ ಪಾರು ಮಾಡಲು ನಾವು ಯಾವುದೇ ಯೋಗ್ಯ ತೀರ್ಮಾನವನ್ನು ಕೈಗೊಳ್ಳಲಿಲ್ಲ.

ತದನಂತರದಲ್ಲಿ ನೀಲ್ ಪತ್ರ ಬರೆಯುವುದನ್ನೇ ನಿಲ್ಲಿಸಿದ. ನಾನು ಅವನ ಹಾಸಿಗೆಯ ಸಮೀಪಕ್ಕೆ ಹೋಗಿ ಕೂರುತ್ತಿದ್ದೆ. ಅವನು ಮೌನವಾಗಿ ಮಲಗಿರುತ್ತಿದ್ದ. ನನ್ನನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ನಾನು ಸ್ವಲ್ಪ ಹೊತ್ತು ಅವನ ಉಸಿರಾಟದ ಏರಿಳಿತವನ್ನು ಗಮನಿಸುತ್ತಿದ್ದೆ. ಅವನ ಗೊರಗೊರ ಶಬ್ದವನ್ನು ಕೇಳುತ್ತಿದ್ದೆ. ಅವನ ಸೊರಗಿದ ಕೈಯನ್ನು ನನ್ನ ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದೆ, ಸ್ವಲ್ಪ ಹೊತ್ತು ಹಾಗೆಯೇ ಕೂರುತ್ತಿದ್ದೆ.

ನಾವು ನೋಡುತ್ತಿರುವಂತೆಯೇ ನೀಲ್ ಪ್ರಜ್ಞೆಯನ್ನು ಕಳೆದುಕೊಂಡ, ಅದೇ ಸ್ಥಿತಿಯಲ್ಲಿ ಅವನು ಕೊನೆ ಉಸಿರೆಳೆದ. ಜುಲೈ ಹದಿನೈದಕ್ಕೆ ಆಸ್ಪತ್ರೆಗೆ ದಾಖಲಾಗಿದ್ದ ಅವನು ಜುಲೈ ಮೂವತ್ತಕ್ಕೆ ಈ ಜಗತ್ತನ್ನೇ ಬಿಟ್ಟು ಹೋದ.

ಅವನ ಕೊನೆಯ ಉಸಿರಿರುವವರೆಗೂ ನಾನು, ಅವನು ಉಳಿಯುತ್ತಾನೆ, ಗುಣಮುಖನಾಗುತ್ತಾನೆ ಎಂದು ಭರವಸೆಯನ್ನು ಹೊಂದಿದ್ದೆ. ನನ್ನ ಆಪ್ತ ಸಹೋದರ ತುಂಬಿದ ಯೌವನದಲ್ಲಿ ಅಕಾಲ ಸಾವಿಗೆ ಬಲಿಯಾದ! ನಾನು ಮತ್ತಷ್ಟು ನೊಂದೆ, ಮತ್ತಷ್ಟು ಕಳೆದುಕೊಂಡೆ. ನೀಲ್ ಅಕಾಲದಲ್ಲಿ ಈ ಜಗತ್ತಿನಿಂದ, ನಮ್ಮ ಜೀವನದಿಂದ ಹೊರಟುಹೋಗಿದ್ದು ಅತ್ಯಂತ ದುಃಖದ ಸಂಗತಿಯಾಗಿತ್ತು, ನಮ್ಮ ಮೇಲೆ ಭಯಾನಕ ವಜ್ರಾಘಾತವಾಗಿತ್ತು. ಅವನು ನಮ್ಮ ಪರಿವಾರದ ಬೆನ್ನೆಲುಬಾಗಿದ್ದ. ಅವನ ಸಾವು ನಮ್ಮ ಕುಟುಂಬದ ವೈಭವವನ್ನು ಮಣ್ಣುಪಾಲು ಮಾಡಿತು. ನನ್ನಲ್ಲಿ ಆ ದುಃಖವನ್ನು, ಆ ಹಾನಿಯನ್ನು ವರ್ಣಿಸಲು ಶಬ್ದಗಳಿಲ್ಲ.

ನನ್ನ ಪಾರ್ಲರ್‌ನಲ್ಲಿ ಗಿರಾಕಿಗಳೆದುರು ನನ್ನ ದುಃಖವನ್ನು ನೆನೆದು ರೋದಿಸುವುದನ್ನು ಪ್ರೊಫೆಶನಲಿಸಂ ಎನ್ನಲಾಗುವುದಿಲ್ಲ. ಆದರೆ ನಾನು ನನ್ನನ್ನು ಕಠಿಣ ನಿಯಂತ್ರಣದಲ್ಲಿಟ್ಟುಕೊಂಡರೂ, ಬಿಕ್ಕಳಿಸಿ ರೋದಿಸಿದೆ. ಎಣ್ಣೆಯಿಂದ ಒದ್ದೆಯಾದ, ಮಸಾಜು ಮಾಡುವ ಕೈಗಳು ಸ್ಥಿರವಾದವು, ಆ ಕೈಗಳು ನನ್ನ ಕಣ್ಣುಗಳನ್ನು ಒರೆಸಲು ಮುಂದಾದವು. ನನ್ನ ಕಥೆಯನ್ನು ಕೇಳುತ್ತಿದ್ದ ಪಾಲ್ ಗಾಬರಿಯಿಂದ ಎದ್ದು ನಿಂತ. ಶಬ್ದಗಳು ಶೂನ್ಯವಾದವು. ಅವನು ನನ್ನ ಹೆಗಲನ್ನು ಹಿಡಿದಿದ್ದ.

'ನ್ಯಾನ್ಸಿ... ಸ್ವಲ್ಪ ಧೈರ್ಯ ವಹಿಸಿ.'

'ಪಾಲ್... ನನ್ನ ಕಿವಿಗಳಲ್ಲಿ ಇನ್ನೂ ಅವನ ನೋವಿನ ನರಳಾಟ ಧ್ವನಿಸುತ್ತಿದೆ. ಅವನು ನನ್ನ ಅವಳಿ ಸಹೋದರ ಮಾತ್ರವಲ್ಲ, ಅವನು ನನಗೆ ಗೈಡ್ ಆಗಿದ್ದ, ನನ್ನ ಹೆಮ್ಮೆಯ ತಮ್ಮನಾಗಿದ್ದ. ಅವನು ಹೊರಟು ಹೋಗಿದ್ದು... ಕಾಯಿಲೆ ಮತ್ತು ಸಾವಿಗೆ ವಯಸ್ಸಿಲ್ಲ ಎಂದು ಅನ್ನಿಸಿತು. ಒಬ್ಬ ವ್ಯಕ್ತಿ ಸತ್ತಾಗ, ಒಂದು ಜೀವನ ಮಾತ್ರ ಹೋಗುವುದಿಲ್ಲ, ಅನೇಕ ಜೀವನಗಳು ಕೊನೆಯಾಗುತ್ತವೆ. ನೀಲ್ ನನಗೊಂದು ದೊಡ್ಡ ಪಾಠವನ್ನು ಕಲಿಸಿ ಹೋಗಿದ್ದ.

ಎಲ್ಲರೂ ಅಪ್ಪನಿಗೆ, ನೀವು ಆಸ್ಪತ್ರೆ ಮತ್ತು ವೈದ್ಯರ ಬಗ್ಗೆ ದೂರು ಕೊಡಿ, ಅವರ ಮೇಲೆ ಕೇಸ್ ಹಾಕಿ, ನೀಲ್ ವೈದ್ಯರ ಬೇಜವಾಬ್ದಾರಿಯಿಂದ ಸತ್ತಿದ್ದಾನೆ ಎಂದರು. ಆದರೆ ಅಪ್ಪಾ ಎಷ್ಟು ಶೋಕತಪ್ತರಾಗಿದ್ದರೆಂದರೆ, ಅವರಲ್ಲಿ ಕೋರ್ಟಿಗೆ ಹೋಗುವಷ್ಟು ಶಕ್ತಿ ಇರಲಿಲ್ಲ. ಒಂದು ಕಡೆ ಪುತ್ರ ಶೋಕ, ಇನ್ನೊಂದು ಕಡೆ ಏನೂ ಮಾಡಲಾಗದಂಥ ಪರಿಸ್ಥಿತಿ – ಈ ಎರಡೂ ವಿಷಯಗಳು ಅವರ ಮನಸ್ಸಿನಲ್ಲಿ ಜಗತ್ತಿನ ಬಗ್ಗೆಯೇ ವೈರಾಗ್ಯವನ್ನು ಮೂಡಿಸಿದ್ದವು. ಅವರು ತಮ್ಮನ್ನು ಮತ್ತಷ್ಟು ಚರ್ಚ್ ಸೇವೆಯಲ್ಲಿ ತೊಡಗಿಸಿಕೊಂಡರು.'

***

ನೀಲ್‌ನ ಅಂತಿಮ ಸಂಸ್ಕಾರದ ನಂತರ ನಾನು ಭಾರವಾದ ಮನಸ್ಸಿನಿಂದ ಮೊಮ್ಬಾಸಾಕ್ಕೆ ಮರಳಿ ಬಂದೆ. ಅವನ ಸಾವು ಹಗಲು–ರಾತ್ರಿ ನನ್ನ ಹೃದಯವನ್ನು ಉದ್ವೇಗಗೊಳಿಸುತ್ತಿತ್ತು. ಯಾವ ಕೆಲಸದಲ್ಲೂ ಮನಸ್ಸಿರಲಿಲ್ಲ. ನೀಲ್‌ನನ್ನು ಕಳೆದುಕೊಂಡಿದ್ದು ಅತೀವ ದುಃಖಕರವಾಗಿತ್ತು. ಅವನ ಜಾಗವನ್ನು ತುಂಬಲು ಸಾಧ್ಯವಿರಲಿಲ್ಲ. ಜೋಶುಆ ತನ್ನ ಎಳೆಯ ಕೈಗಳಿಂದ ನನ್ನ ಕಣ್ಣೀರನ್ನು ಒರೆಸುತ್ತಿದ್ದ. ನಾನು ಅವನನ್ನು ಅಪ್ಪಿಕೊಂಡು ರೋದಿಸುತ್ತಿದ್ದೆ. ನನ್ನ ಗೆಳತಿಯರಾದ ರೋಜ್, ಮಾರ್ಯಾ ಮತ್ತು ಬೆಲಿಂಡಾ ಸಹ ನನ್ನನ್ನು ಸಮಾಧಾನಪಡಿಸುತ್ತಿದ್ದರು. ಮೌರೀನ್ ನೆರಳಿನಂತೆ ನನ್ನೊಂದಿಗಿರುತ್ತಿದ್ದರು. ನನ್ನ ತಲೆಯನ್ನು ನೀವುತ್ತಿದ್ದರು, ಶರೀರವನ್ನು ನೇವರಿಸುತ್ತಿದ್ದರು. ನನಗಾಗಿ ಅಡುಗೆ ಮಾಡಿ ತರುತ್ತಿದ್ದರು. ನನಗೆ ಒತ್ತಾಯದಿಂದ ಉಣಿಸುತ್ತಾ, 'ಏಯ್ ಹುಡುಗಿ, ನೀನು ಸ್ವಾರ್ಥಿಯಾಗು... ನಿನ್ನ ಮಗನಿಗೋಸ್ಕರ ಸ್ವಾರ್ಥಿಯಾಗು... ನಿನ್ನ ಸಹೋದರ ಸಹ ಸ್ವರ್ಗದಲ್ಲಿ ನೀನು ಅಳುವುದನ್ನು ನೋಡಿ ರೋದಿಸುತ್ತಾನೆ' ಎನ್ನುತ್ತಿದ್ದರು.

ನಾನು ಇನ್ನಷ್ಟು ಗಟ್ಟಿಯಾಗಿ ರೋದಿಸುತ್ತಿದ್ದೆ, 'ನನ್ನಿಂದ ನೀಲ್‌ನನ್ನು ಮರೆಯಲು ಸಾಧ್ಯವಿಲ್ಲ... ಎಂದಿಗೂ ಮರೆಯಲು ಸಾಧ್ಯವಿಲ್ಲ.'

ನನ್ನ ವ್ಯಗ್ರತೆಯನ್ನು ಅಬ್ರಾಹಮ್ ಸಹ ಅರ್ಥ ಮಾಡಿಕೊಂಡ. ಅದೇನು ಯೋಚಿಸಿಯೋ